**ಎರಡನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂಃ ನ್ಯಾಯಾಲಯ, ಮದ್ದೂರು.**

**ಸಿಸಿ 395/2016**

| | | | |
|---|---|---|---|
| ಸಾಕ್ಷಿದಾರರ ಹೆಸರು | - ಲೋಕೇಶ್ ಎ ಸಿ | ಚಾ.ಸಾ-5 |
| ತಂದೆಯ ಹೆಸರು | - ಚನ್ನೇಗೌಡ | ಪ್ರಾ.ಸಾ-4 |
| ವಯಸ್ಸು | - 51 ವರ್ಷ | |
| ಉದ್ಯೋಗ | - ಪಿ ಐ | |
| ವಾಸಸ್ಥಳ | - ಮಂಗಳೂರು | |

ದಿನಾಂಕಃ 11-03-2024 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ:ಅಭಿಯೋಜನೆಯ ಪರಃ ಎಪಿಪಿ ಯವರಿಂದ:**

ನಾನು ಜುಲೈ 2008 ರಿಂದ ಸೆಪ್ಟೆಂಬರ್ 2009 ರವರೆಗೆ ಮದ್ದೂರು ಪೋಲೀಸ್ ಠಾಣೆಯಲ್ಲಿ ಪಿ ಎಸ್ ಐ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕಃ 22.05.2009 ರಂದು ಬೆಳಗ್ಗೆ 11.30 ಗಂಟೆಯ ಸಮಯದಲ್ಲಿ ನಾನು ಠಾಣಾ ಉಸ್ತುವಾರಿಯಲ್ಲಿದ್ದಾಗ ಚಾ.ಸಾ. 1 ರವರು ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರನ್ನು ಸ್ವೀಕರಿಸಿಕೊಂಡು ಠಾಣಾ ಮೊಕದ್ದಮೆ ಸಂಖ್ಯೆ 226/209 ರಂತೆ ದಾಖಲು ಮಾಡಿಕೊಂಡು, ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಮತ್ತು ನಮ್ಮ ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ. ಅದೇ ದಿನ ಮಧ್ಯಾಹ್ನ 02.45 ಗಂಟೆ ಸಮಯದಲ್ಲಿ ಚಾ.ಸಾ. 1 ರವರು ಠಾಣೆಗೆ ಹಾಜರಾಗಿ ಈ ಪ್ರಕರಣ ಗಾಯಾಳು ಎನ್ ಹೆಚ ಹರೀಶ್ ರವರು ಮೃತಪಟ್ಟಿರುತ್ತಾರೆಂದು ನೀಡಿದ ಲಿಖಿತ ದೂರನ್ನು ಸ್ವೀಕರಿಸಿ, ಮಾನ್ಯ ನ್ಯಾಯಾಲಯಕ್ಕೆ ಭಾರತ ದಂಡ ಸಂಹಿತೆ ಕಲಂ 279, 304(ಎ) ನ್ನು ಅಳವಡಿಸಿಕೊಳ್ಳಲು ನಿವೇದನೆಯನ್ನು ನೀಡಿರುತ್ತೇನೆ. ನಂತರ ಈ ಪ್ರಕರಣದ ಕಡತವನ್ನು ಮುಂದಿನ ತನಿಖೆಯನ್ನು ಚಾ.ಸಾ. 7 ರವರಿಗೆ ವಹಿಸಿಕೊಟ್ಟಿರುತ್ತೇನೆ.

ಪ್ರ.ವ. ವರದಿಯ ದೃಢೀಕೃತ ನಕಲನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿ.ಪಿ. 3 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ  ಆರೋಪಿ *1* ರವರ ಪರ ವಕೀಲರುಃ ಎನ್ ಪಿ  ಯವರಿಂದಃ</u>**

ಅಪರಾಧ ಸಂಖ್ಯೆ *226/2009* ರಂತೆ ದೂರನ್ನು ಸ್ವೀಕರಿಸಿ, ನ್ಯಾಯಾಲಯಕ್ಕೆ ಪ.ವ. ವರದಿಯನ್ನು  ಸಲ್ಲಿಸಿರುತ್ತೀರಿ ಎಂದರೆ ಸರಿ.  ಸದರೀ ಪ್ರಕರಣದಲ್ಲಿ ನಾನು ಸ್ಥಳಕ್ಕೆ ಹೋಗಿ, ತನಿಖೆ ಮಾಡಿರುವುದಿಲ್ಲ.  ಸದರೀ ಪ್ರಕರಣದಲ್ಲಿ ಮೃತ ವ್ಯಕ್ತಿಯ ಬಗ್ಗೆ ನಾನು ತನಿಖೆ ಮಾಡಿಲ್ಲ.  ನಾನು ಆ ಪ್ರಕರಣದಲ್ಲಿ ಸಾಕ್ಷಿದಾರರ ಹೇಳಿಕೆಗಳನ್ನು ಪಡೆದುಕೊಂಡಿರುವುದಿಲ್ಲ. ನಾನು ಸದರೀ ಪ್ರಕರಣದಲ್ಲಿ ಅಪಘಾತಪಡಿಸಿದ ವಾಹನ ಮತ್ತು ಚಾಲಕನ ಬಗ್ಗೆ ತನಿಖೆ ಮಾಡಿರುವುದಿಲ್ಲ.  ಸದರೀ ಪ್ರಕರಣದಲ್ಲಿ ನಾನು ದೂರನ್ನು ಸ್ವೀಕರಿಸಿ ಪ್ರ.ವ. ವರದಿಯನ್ನು ದಾಖಲು ಮಾಡಿರುತ್ತೇನೆಯೇ ವಿನಃ ಯಾವುದೇ ತನಿಖೆ ಮಾಡಿಲ್ಲ.  ನಿಮಗೆ ಈ ಪ್ರಕರಣದ ತನಿಖೆಯ ಬಗ್ಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿ.  ನೀವು ದೂರನ್ನು ಸ್ವೀಕರಿಸಿ, ಈ ಪ್ರಕರಣದ ಕಡತವನ್ನು ಚಾ,ಸಾ. *7* ರವರಿಗೆ ಹೆಚ್ಚಿನ ತನಿಖೆಗಾಗಿ ಹಸ್ತಾಂತರಿಸಿರುತ್ತೀರಿ ಎಂದರೆ ಸರಿ.

**ಪಾಟೀ ಸವಾಲುಃ  ಆರೋಪಿ *2* ಮತ್ತು *4*  ರವರ ಪರ ವಕೀಲರು ಆರೋಪಿ *1* ರವರ ಪರ ವಕೀಲರು ಮಾಡಿರುವಪಾಟೀ ಸವಾಲನ್ನು ಅಳವಡಿಸಿಕೊಳ್ಳಲು ಕೋರಿಕೊಂಡ ಮೇರೆಗೆ ಅಳವಡಿಸಿಕೊಂಡಿರುತ್ತೇನೆ.**

**<u>ಮರು ವಿಚಾರಣೆ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿಯಾಗಿದೆಂದು ಒಪ್ಪಿರುತ್ತಾರೆ.

2 ನೇ ಅಪರ ಸಿವಿಲ್ ಮತ್ತು
ಜೆ.ಎಂ.ಎಫ್.ಸಿ. ನ್ಯಾಯಾಧೀಶರು, ಮದ್ದೂರು.

ಸಾಕ್ಷಿ ಸಹಿಃ